8. ಅನುಬಂಧ–(ಅ)

ಸರ್ವ ಶಿಕ್ಷಣ ಅಭಿಯಾನದಡಿ ಅನುದಾನಿತ ಶಾಲೆ

403(729) ಶ್ರೀ ಅಭಯಚಂದ್ರ ಜೈನ್. ಕೆ (ಮೂಡುಬಿದ್ರಿ) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) ಸರ್ವ ಶಿಕ್ಷಣ ಅಭಿಯಾನದಡಿ ಹಲವು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ಎಂಟನೇ ತರಗತಿ ಪ್ರಾರಂಭಿಸಲು ಆದೇಶಿಸಿರುವುದರಿಂದ ಹಲವಾರು ವರ್ಷಗಳಿಂದ ನಡೆಯುತ್ತಿರುವ ಅನುದಾನಿತ ಹಾಗೂ ಅನುದಾನ ರಹಿತ ಪ್ರೌಢ ಶಾಲೆ ಶಿಕ್ಷಕರಿಗೆ ಹಾಗೂ ಪ್ರೌಢ ಶಾಲೆಗಳಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ:

(ಆ) ಹಾಗಿದ್ದಲ್ಲಿ, ಈ ತೊಂದರೆ ಸರಿಪಡಿಸಲು ಏನು ಕ್ರಮ ಕೈಗೊಳ್ಳಲಾಗಿದೆ?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):–

(ಅ) ಇಲ್ಲ.

(ಆ) ಉದ್ಭವಿಸುವುದಿಲ್ಲ.

ಸರ್ವ ಶಿಕ್ಷಣ ಅಭಿಯಾನ

404 (730) ಶ್ರೀ ಅಭಯ ಚಂದ್ರ ಜೈನ್. ಕೆ (ಮೂಡುಬಿದ್ರಿ) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) ಮಂಗಳೂರು ತಾಲ್ಲೂಕಿನಲ್ಲಿ ಸರ್ವ ಶಿಕ್ಷಣ ಅಭಿಯಾನದಡಿ ಶಾಲೆಗಳಲ್ಲಿ ಎಂಟನೇ ತರಗತಿಯನ್ನು ಪ್ರಾರಂಭಿಸಲಾಗಿದೆಯೇ (ವಿವರ ಒದಗಿಸುವುದು);

(ಆ) ಹಾಗಿದ್ದಲ್ಲಿ ಓರ್ವ ವಿಜ್ಞಾನ ಶಿಕ್ಷಕರನ್ನು ಮಾತ್ರ ಹೆಚ್ಚುವರಿಯಾಗಿ ನೇಮಿಸಲಾಗಿದೆಯೇ?

(ಇ) ಉಳಿದ ಸಮಾಜಶಾಸ್ತ್ರ, ಇಂಗ್ಲೀಷ್, ಹಿಂದಿ ವಿಷಯಗಳನ್ನು ಬೋಧಿಸಲು ಶಿಕ್ಷಕರನ್ನು ನೇಮಿಸಲಾಗುವುದೆ?

(ಈ) 8ನೇ ತರಗತಿ ಪ್ರಾರಂಭಿಸಲು ಸರ್ಕಾರ ಆದೇಶ ನೀಡಿದ್ದರೂ ಶಿಕ್ಷಕರನ್ನು ನೇಮಿಸದೇ ಇರುವುದರಿಂದ ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):–

(ಅ) ಹೌದು ಮಂಗಳೂರು ತಾಲ್ಲೂಕಿನಲ್ಲಿ ಒಟ್ಟು 40 ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ಎಂಟನೇ ತರಗತಿಯನ್ನು ಪ್ರಾರಂಭಿಸಲಾಗಿದೆ. (ವಿವರವನ್ನು ಅನುಬಂಧದಲ್ಲಿ ಲಗತ್ತಿಸಲಾಗಿದೆ.)

(ಆ) ಹೌದು

(ಇ) ಇಲ್ಲ.

(ಈ) ಇಲ್ಲ ಈ ಯೋಜನೆಯಡಿ ಸಮಾಜ ವಿಜ್ಞಾನ, ಇಂಗ್ಲೀಷ್ ಮತ್ತು ಹಿಂದಿ ಬೋಧಿಸುವ ಶಿಕ್ಷಕರನ್ನು ನೇಮಿಸಲು ಅವಕಾಶವಿರುವುದಿಲ್ಲ.

ಮಂಗಳೂರು ತಾಲ್ಲೂಕಿನಲ್ಲಿ 8ನೇ ತರಗತಿ ಪ್ರಾರಂಭಿಸಲಾದ 40 ಶಾಲೆಗಳ ಪೈಕಿ 36 ಶಾಲೆಗಳಲ್ಲಿ ವಿಜ್ಞಾನ ಪದವೀಧರರನ್ನು (ಟಿ.ಜಿ.ಟಿ.) ಈಗಾಗಲೇ ನೇಮಿಸಲಾಗಿದ್ದು, ಕರ್ತವ್ಯ ನಿರ್ವಹಿಸುತ್ತಿದ್ದಾರೆ. 3 ಶಾಲೆಗಳಿಗೆ ಶಿಕ್ಷಕರ ಸಹಿತ ಹುದ್ದೆ (ಹೆಚ್ಚುವರಿ) ಸ್ಥಳಾಂತರಕ್ಕೆ ಕ್ರಮ ಕೈಗೊಳ್ಳಲಾಗಿದೆ. ಒಂದು ಹುದ್ದೆಗೆ ನೇರ ನೇಮಕಾತಿ ಮಾಡಲಾಗಿದ್ದು, ಆಯ್ಕೆಯಾದ ಶಿಕ್ಷಕರು ಬುನಾದಿ ತರಬೇತಿ ಪಡೆಯುತ್ತಿದ್ದು ತರಬೇತಿ ನಂತರ, ಶಾಲೆಗೆ ಶಿಕ್ಷಕರನ್ನು ನೀಡಲಾಗುವುದು.

ಸರ್ವ ಶಿಕ್ಷಣ ಅಭಿಯಾನದಡಿ ಶಾಲೆಗಳಲ್ಲಿ ಎಂಟನೇ ತರಗತಿ ಪ್ರಾರಂಭಿಸಲಾದ ವಿವರ

(ಚುಕ್ಕೆ ಗುರುತಿಲ್ಲದ ಪ್ರಶ್ನೆ: 730ಕ್ಕೆ ಅನುಬಂಧ)

ಕ್ರ.ಸಂ.	ವಲಯ	ಶಾಲೆಯ ವಿವರ
1	ಮಂಗಳೂರು ನಗರ	ಸ.ಹಿ.ಪ್ರಾ.ಶಾಲೆ ನಾಲ್ಯಪದವು
2	ಮಂಗಳೂರು ನಗರ	ಸ.ಹಿ.ಪ್ರಾ.ಶಾಲೆ ಮುಲ್ಲಕಾಡು
3	ಮಂಗಳೂರು ನಗರ	ಸ.ಹಿ.ಪ್ರಾ.ಶಾಲೆ ಕೋಡಿಕಲ್
4	ಮಂಗಳೂರು ನಗರ	ಸ.ಹಿ.ಪ್ರಾ.ಶಾಲೆ ಮರಕಡ
5	ಮಂಗಳೂರು ತಾಲ್ಲೂಕು	ಸ.ಹಿ.ಪ್ರಾ.ಶಾಲೆ ಮಂಜನಾಡಿ
6	ಮಂಗಳೂರು ತಾಲ್ಲೂಕು	ಸ.ಹಿ.ಪ್ರಾ.ಶಾಲೆ ಕಿನ್ಯ
7	ಮಂಗಳೂರು ತಾಲ್ಲೂಕು	ಸ.ಹಿ.ಪ್ರಾ.ಶಾಲೆ ಮೇಲಂಗಡಿ

8	ಮಂಗಳೂರು ತಾಲ್ಲೂಕು	ಸ.ಹಿ.ಪ್ರಾ.ಶಾಲೆ ಕಣ್ಣೂರು ಮುಸ್ಲಿಂ
9	ಮಂಗಳೂರು ತಾಲ್ಲೂಕು	ಸ.ಹಿ.ಪ್ರಾ.ಶಾಲೆ ಬಜಾಲ್ ಪಡ್ಪು
10	ಮಂಗಳೂರು ತಾಲ್ಲೂಕು	ಸ.ಹಿ.ಪ್ರಾ.ಶಾಲೆ ಕುತ್ತೆತ್ತೂರು
11	ಮಂಗಳೂರು ತಾಲ್ಲೂಕು	ಸ.ಹಿ.ಪ್ರಾ.ಶಾಲೆ ಸದಾಶಿವ ನಗರ
12	ಮಂಗಳೂರು ತಾಲ್ಲೂಕು	ಸ.ಹಿ.ಪ್ರಾ.ಶಾಲೆ ಬರುವ ಎಲ್ಯಾರ್ ಪದವು
13	ಮಂಗಳೂರು ತಾಲ್ಲೂಕು	ಸ.ಹಿ.ಪ್ರಾ.ಶಾಲೆ ಪಿಲಾರು
14	ಮಂಗಳೂರು ತಾಲ್ಲೂಕು	ಸ.ಹಿ.ಪ್ರಾ.ಶಾಲೆ ಕಿನ್ನಿಕಂಬಳ
15	ಮಂಗಳೂರು ತಾಲ್ಲೂಕು	ಸ.ಹಿ.ಪ್ರಾ.ಶಾಲೆ ಕಲ್ಲಾಪುಪಟ್ಲ
16	ಮಂಗಳೂರು ತಾಲ್ಲೂಕು	ಸ.ಹಿ.ಪ್ರಾ.ಶಾಲೆ ಅಂಬ್ಲಮೊಗರು
17	ಮಂಗಳೂರು ತಾಲ್ಲೂಕು	ಸ.ಹಿ.ಪ್ರಾ.ಶಾಲೆ ರಾಜಗುಡ್ಡೆ
18	ಮಂಗಳೂರು ತಾಲ್ಲೂಕು	ಸ.ಹಿ.ಪ್ರಾ.ಶಾಲೆ ಐಕಳ
19	ಮಂಗಳೂರು ತಾಲ್ಲೂಕು	ಸ.ಹಿ.ಪ್ರಾ.ಶಾಲೆ ಮುಚ್ಚೂರು
20	ಮಂಗಳೂರು ತಾಲ್ಲೂಕು	ಸ.ಹಿ.ಪ್ರಾ.ಶಾಲೆ ಬಜಾಲ್ ನಂತೂರು
21	ಮಂಗಳೂರು ತಾಲ್ಲೂಕು	ಸ.ಹಿ.ಪ್ರಾ.ಶಾಲೆ ಮೀನಾದಿ
22	ಮಂಗಳೂರು ತಾಲ್ಲೂಕು	ಸ.ಹಿ.ಪ್ರಾ.ಶಾಲೆ ಬೊಳಿಯಾರು ಮಸೀದಿ ಬಳಿ
23	ಮಂಗಳೂರು ತಾಲ್ಲೂಕು	ಸ.ಹಿ.ಪ್ರಾ.ಶಾಲೆ ವಳಚ್ಚಿಲ್
24	ಮಂಗಳೂರು ತಾಲ್ಲೂಕು	ಸ.ಹಿ.ಪ್ರಾ.ಶಾಲೆ ಕುಂಪಲ
25	ಮಂಗಳೂರು ತಾಲ್ಲೂಕು	ಸ.ಹಿ.ಪ್ರಾ.ಶಾಲೆ ಕರ್ನಿರೆ
26	ಮಂಗಳೂರು ತಾಲ್ಲೂಕು	ಸ.ಹಿ.ಪ್ರಾ.ಶಾಲೆ ಉರುಮಣೆ
27	ಮಂಗಳೂರು ತಾಲ್ಲೂಕು	ಸ.ಹಿ.ಪ್ರಾ.ಶಾಲೆ ಬೊಳಿಯಾರು
28	ಮಂಗಳೂರು ತಾಲ್ಲೂಕು	ಸ.ಹಿ.ಪ್ರಾ.ಶಾಲೆ ಉಳಾಯಿಬೆಟ್ಟು
29	ಮಂಗಳೂರು ತಾಲ್ಲೂಕು	ಸ.ಹಿ.ಪ್ರಾ.ಶಾಲೆ ಮಾಡೂರು
30	ಮೂಡಬಿದ್ರೆ	ಸ.ಹಿ.ಪ್ರಾ.ಶಾಲೆ ಕಲ್ಲಬೆಟ್ಟು
31	ಮೂಡಬಿದ್ರೆ	ಸ.ಹಿ.ಪ್ರಾ.ಶಾಲೆ ಹಂಡೇಲು

32	ಮೂಡಬಿದ್ರೆ	ಸ.ಹಿ.ಪ್ರಾ.ಶಾಲೆ ಇರುವೈಲು
33	ಮೂಡಬಿದ್ರೆ	ಸ.ಹಿ.ಪ್ರಾ.ಶಾಲೆ ಪೂಪಾಡಿ ಕಲ್ಲು
34	ಮೂಡಬಿದ್ರೆ	ಸ.ಹಿ.ಪ್ರಾ.ಶಾಲೆ ಪುಚ್ಚಮೊಗರು
35	ಮೂಡಬಿದ್ರೆ	ಸ.ಹಿ.ಪ್ರಾ.ಶಾಲೆ ಮಾರೂರು ಹೊಸಂಗಡಿ
36	ಮೂಡಬಿದ್ರೆ	ಸ.ಹಿ.ಪ್ರಾ.ಶಾಲೆ ಪಡುಕೊಣಾಜೆ
37	ಮೂಡಬಿದ್ರೆ	ಸ.ಹಿ.ಪ್ರಾ.ಶಾಲೆ ನೀರ್ಕೆರೆ
38	ಮೂಡಬಿದ್ರೆ	ಸ.ಹಿ.ಪ್ರಾ.ಶಾಲೆ ಮಾಂಟ್ರಾಡಿ
39	ಮೂಡಬಿದ್ರೆ	ಸ.ಹಿ.ಪ್ರಾ.ಶಾಲೆ ಮೂಡಬಿದ್ರೆ ಮೈನ್
40	ಮೂಡಬಿದ್ರೆ	ಸ.ಹಿ.ಪ್ರಾ.ಶಾಲೆ ಬೆಳುವಾಯಿ ಮೈನ್

ಸಹ ನಿರ್ದೇಶಕರು (ಕಾರ್ಯಕ್ರಮಗಳು)
ಸರ್ವ ಶಿಕ್ಷಣ ಅಭಿಯಾನ

ಓಂಬುಡ್ಸ್‌ಮನ್‌ಗಳಿಗೆ ಕಛೇರಿ ಕೊಠಡಿ ಹಂಚಿಕೆ

405 (973) ಶ್ರೀ ಅಭಯಚಂದ್ರ ಜೈನ್. ಕೆ (ಮೂಡುಬಿದ್ರಿ) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) ಪಂಚಾಯಿತಿ ಡೆವಲಪ್‌ಮೆಂಟ್ ಆಫೀಸರ್ಸ್/ಓಂಬುಡ್ಸ್‌ಮನ್‌ಗಳಿಗೆ ತಾಲ್ಲೂಕು ಪಂಚಾಯಿತಿ ಸಮಿತಿ ಕಚೇರಿಯಲ್ಲಿ ಪ್ರತ್ಯೇಕವಾಗಿ ಕಚೇರಿ ಕೊಠಡಿಗಳನ್ನು ಮಂಜೂರು ಮಾಡಲಾಗುವುದೇ;

(ಆ) ಹಾಗಿದ್ದಲ್ಲಿ, ಈ ಅಧಿಕಾರಿಗಳ ಕೊಠಡಿಗಳ ನಿರ್ಮಾಣಕ್ಕೆ ಸರ್ಕಾರ ಹಣವನ್ನು ಬಿಡುಗಡೆಗೊಳಿಸುವುದೇ?

ಶ್ರೀ ಜಗದೀಶ್ ಶೆಟ್ಟರ್ (ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಸಚಿವರು):–

(ಅ) ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳನ್ನು ಗ್ರಾಮ ಪಂಚಾಯಿತಿಗಳಿಗೆ ನೇಮಕಾತಿ ಮಾಡಲಾಗಿರುವುದರಿಂದ ಅವರುಗಳು ಗ್ರಾಮ ಪಂಚಾಯಿತಿ ಕಛೇರಿಗಳಲ್ಲಿ